ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**
ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101
Raitha Bhavana, General Cariappa Circle, Gadag – 582 101
E-mail: ksrdpruadmissions@gmail.com Phone: 08372-230338, Fax: 08372-297343

ನಂ: ಆರ್.ಡಿ.ಪಿ.ಆರ್.ಯು 16 ಶೈಕ್ಷಣಿ 2024 ದಿನಾಂಕ:22-07-2024

## 2024-25 ನೇ ಸಾಲಿಗೆ ಪ್ರವೇಶ ಅಧಿಸೂಚನೆ

**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 22-07-2024**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ 2024-25 ನೇ ಸಾಲಿಗೆ ಈ ಕೆಳಕಂಡ ವಿಷಯಗಳಲ್ಲಿ ಸ್ನಾತಕೋತ್ತರ ಪ್ರೋಗ್ರಾಮ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಹಾಗೂ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಂದ ಸಮುಚಿತ ಮಾರ್ಗದ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿದೆ.

| | | |
|---|---|---|
| ಎಂ.ಎ. | – | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ / ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ನಿರ್ವಹಣೆ. |
| ಎಂ.ಎ. | – | ಸಾರ್ವಜನಿಕ ಆಡಳಿತ. |
| ಎಂ.ಎ. | – | ಅರ್ಥಶಾಸ್ತ್ರ (ಅಭಿವೃದ್ಧಿ ಅರ್ಥಶಾಸ್ತ್ರ). |
| ಎಂ.ಎಸ್.ಡಬ್ಲ್ಯೂ. | – | ಸಮುದಾಯ ಅಭಿವೃದ್ಧಿ / ಸಮುದಾಯ ಆರೋಗ್ಯ |
| ಎಂ.ಕಾಂ. | – | ಉದ್ಯಮ ಶೀಲತೆ/ ಸಹಕಾರ ನಿರ್ವಹಣೆ. |
| ಎಂ.ಎಸ್ಸಿ. | – | ಜಿಯೊಇನ್ಫಾರಮೆಟಿಕ್ಸ್. |
| ಎಂ.ಎಸ್ಸಿ. | – | ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ. |
| ಎಂ.ಎಸ್ಸಿ. | – | ಕಂಪ್ಯೂಟರ್ ಸೈನ್ಸ (ಡಾಟಾ ಅನೆಲೆಟಿಕ್ಸ). |
| ಎಂ.ಪಿ.ಹೆಚ್. | – | ಸಾರ್ವಜನಿಕ ಆರೋಗ್ಯ. |
| ಎಂ.ಬಿ.ಎ. | – | ಗ್ರಾಮೀಣ ನಿರ್ವಹಣೆ / ಕೃಷಿ ವ್ಯವಹಾರ ನಿರ್ವಹಣೆ. |

**ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:**

- ಅರ್ಜಿ ನಮೂನೆ ಮತ್ತು ಅರ್ಹತೆ, ಪ್ರೋಗ್ರಾಮ್ ಶುಲ್ಕದ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್ www.ksrdpru.ac.in ನಲ್ಲಿ ನೋಡಿ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು. ಒಂದಕ್ಕಿಂತ ಹೆಚ್ಚಿನ ಕೋರ್ಸಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪ್ರತಿ ಪ್ರೋಗ್ರಾಮ್‌ಗೆ ಪ್ರತ್ಯೇಕ ಅರ್ಜಿ ಹಾಗೂ ಅರ್ಜಿಯ ಶುಲ್ಕವನ್ನು ನೀಡಬೇಕು.
- ಅರ್ಜಿ ನಮೂನೆ, ಅರ್ಹತೆ ಮತ್ತು ಪ್ರೋಗ್ರಾಮ್‌ಗಳ ಶುಲ್ಕದ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್ www.ksrdpru.ac.in ನಲ್ಲಿ ನೋಡಿ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು. ಸಾಮಾನ್ಯ ವರ್ಗದ ಅಭ್ಯರ್ಥಿಗಳು ರೂ.300/- ಹಾಗೂ ಪ.ಜಾ/ಪ.ಪಂಗಡ/ಪ್ರವರ್ಗ–1/ವಿಕಲಚೇತನರು ರೂ.150/- ಅರ್ಜಿ ಶುಲ್ಕವನ್ನು "ಹಣಕಾಸು ಅಧಿಕಾರಿಗಳು, ಕೆ.ಎಸ್.ಆರ್.ಡಿ.ಪಿ.ಆರ್.ಯು. ಗದಗ," ಇವರ ಹೆಸರಿಗೆ ಡಿ.ಡಿ ಪಡೆದು, ಡಿ.ಡಿ ಹಿಂಭಾಗದಲ್ಲಿ ಅಭ್ಯರ್ಥಿಯ ಹೆಸರು, ಹಾಗೂ ಮೊಬೈಲ್ ನಂ. ನಮೂದಿಸಿ, ಭರ್ತಿ ಮಾಡಿ ಅಥವಾ ಅರ್ಜಿ ಶುಲ್ಕವನ್ನು ಆನ್–ಲೈನ್‌ಲ್ಲಿ ಸಹ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ SB Account Number: 31400100007777, Bank of Baroda, IFSC Code: BARB0GADAGX (5th letter stands for 'Zero') ಗೆ, NEFT / RTGS / UPI ಮುಖಾಂತರ ಪಾವತಿಸಿ, Transaction ID Screen Shot Print-Out ಪಡೆದು, ಭರ್ತಿ ಮಾಡಿದ ಅರ್ಜಿ / ಅರ್ಜಿಗಳನ್ನು "ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಜನರಲ್ ಕಾರ್ಯಪ್ಪ ವೃತ್ತ, ಗದಗ," ಇವರಿಗೆ ಸೂಕ್ತ ದಾಖಲೆಗಳು ಹಾಗೂ ಸಂದಾಯಮಾಡಿದ ಮೂಲ ಶುಲ್ಕದ ರಸೀದಿ / Transaction ID Screen Shot Print-Out ನ **2** ಪ್ರತಿಗಳನ್ನು ಲಗತ್ತಿಸಿ, ಖುದ್ದಾಗಿ / ತ್ವರಿತ ಅಂಚೆ / ಕೋರಿಯರ್ ಮೂಲಕ ದಿನಾಂಕ:**31-08-2024** ರೊಳಗೆ ಸಲ್ಲಿಸಬೇಕು.

- ವಿವಿಧ ಪ್ರೋಗ್ರಾಮ್‌ಗಳಿಗೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 301 ಜಿಪಸ 2017, ದಿ:17-10-2017 ರನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಪ್ರತಿ ಪ್ರೋಗ್ರಾಮ್‌ಗಳಿಗೆ ಎರಡು (೨) ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶಾತಿಯನ್ನು ನೀಡಬಹುದಾಗಿದೆ, ಹೆಚ್ಚಿನ ವಿವರಗಳಿಗಾಗಿ ಮೇಲೆ ತಿಳಿಸಿರುವ ಕರ್ನಾಟಕ ಸರ್ಕಾರದ ಆದೇಶವನ್ನು ವಿ.ವಿ.ಯ ವೆಬ್ ಸೈಟ್‌ನಲ್ಲಿ ನೋಡಬಹುದಾಗಿರುತ್ತದೆ. ಅಂತಹ ಅಭ್ಯರ್ಥಿಗಳಿಗೆ ಪ್ರೋಗ್ರಾಮ್‌ಗಳ ಹಾಗೂ ಇನ್ನಿತರೆ ಶುಲ್ಕಗಳಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ ಮತ್ತು ಅರ್ಜಿಗಳನ್ನು ಸಮುಚಿತ ಮಾರ್ಗದಿಂದ ಸಲ್ಲಿಸಬೇಕು.
- ಅಪೂರ್ಣ ಅರ್ಜಿಗಳಿದ್ದಲ್ಲಿ (ಪೂರಕ ದಾಖಲೆಗಳು ಇಲ್ಲದ ಪ್ರಕರಣಗಳಿದ್ದಲ್ಲಿ) ಯಾವುದೇ ಮುನ್ಸೂಚನೆ ನೀಡದೇ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಪ್ರವೇಶಾತಿ ಸಯೋಜಕರನ್ನು ಸಂಪರ್ಕಿಸಬಹುದಾಗಿದೆ:

| ಕ್ರ ಸಂ | ಸ್ನಾತಕೋತ್ತರ ಪ್ರೋಗ್ರಾಮ್ | ಮೊಬೈಲ್ ನಂ |
|---|---|---|
| 1 | ಎಂ.ಎ. – ಗ್ರಾಮೀಣಾಭಿವೃದ್ಧಿ (ಪಂಚಾಯತ್ ರಾಜ್ / ಸಹಕಾರ ನಿರ್ವಹಣೆ) | 9448056077 |
| 2 | ಎಂ.ಎ. – ಸಾರ್ವಜನಿಕ ಆಡಳಿತ | 8095451616 |
| 3 | ಎಂ.ಎ. – ಅರ್ಥಶಾಸ್ತ್ರ (ಅಭಿವೃದ್ಧಿ ಅರ್ಥಶಾಸ್ತ್ರ) | 8792734641 |
| 4 | ಎಂ.ಎಸ್.ಡಬ್ಲ್ಯೂ | 8217721324 |
| 5 | ಎಂ.ಕಾಂ. | 9844456930 |
| 6 | ಎಂ.ಬಿ.ಎ. ಗ್ರಾಮೀಣ ನಿರ್ವಹಣೆ / ಕೃಷಿ ವ್ಯವಹಾರ ನಿರ್ವಹಣೆ. | 7259937474 |
| 7 | ಎಂ.ಎಸ್ಸಿ. – ಜಿಯೊಇನ್ಫರ್ಮೆಟಿಕ್ | 7892251362 |
| 8 | ಎಂ.ಎಸ್ಸಿ. – ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ | 7899792597 |
| 9 | ಎಂ.ಎಸ್ಸಿ. – ಕಂಪ್ಯೂಟರ ಸೈನ್ಸ್ (ಡಾಟಾ ಅನೆಲೆಟಿಕ್ಸ್) | 9980205502 |
| 10 | ಎಂ.ಪಿ.ಹೆಚ್. – ಸಾರ್ವಜನಿಕ ಆರೋಗ್ಯ | 9980791212 |

**ಹೆಚ್ಚಿನ ಮಾಹಿತಿಗಾಗಿ ಪ್ರವೇಶಾತಿ ಮಾಹಿತಿ ಕೇಂದ್ರ – 7975202206 / 7795100729.**

| | | |
|---|---|---|
| ಅ) | ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ | 31-08-2024 |
| ಆ) | ತಾತ್ಕಾಲಿಕ ಜೇಷ್ಠತಾಪಟ್ಟಿ ಪ್ರಕಟಿಸುವ ದಿನಾಂಕ | 05-09-2024 |
| ಇ) | ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ದೋಷಗಳ ಬಗ್ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 06-09-2024 |
| ಈ) | ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ ಕೌನ್ಸೆಲಿಂಗ ಮತ್ತು ಪ್ರವೇಶ ಪ್ರಕ್ರಿಯೆ ಪ್ರಾರಂಭ ದಿನಾಂಕ | 09-09-2024 ರಿಂದ 12-09-2024 |
| ಉ) | ಕೌನ್ಸೆಲಿಂಗ ಮತ್ತು ಪ್ರವೇಶ ಪ್ರಕ್ರಿಯೆ ನಿರೀಕ್ಷಣಾ ಪಟ್ಟಿಯಲ್ಲಿರುವ ವಿದ್ಯಾರ್ಥಿಗಳಿಗೆ ಪ್ರವೇಶ ಪ್ರಾರಂಭ ದಿನಾಂಕ (Wait List) | 13-09-2024 ರಿಂದ 18-09-2024 |
| ಊ) | ಪ್ರಥಮ ಸೆಮಿಸ್ಟರ್ ತರಗತಿಗಳು ಪ್ರಾರಂಭವಾಗುವ ದಿನಾಂಕ | 19-09-2024 |

**ಸೂಚನೆ:**

೧) ಎಂ.ಬಿ.ಎ–ಗ್ರಾಮೀಣ ನಿರ್ವಹಣೆ / ಕೃಷಿ ವ್ಯವಹಾರ ನಿರ್ವಹಣೆ ಪ್ರೋಗ್ರಾಮ್‌ಗೆ **ಕರ್ನಾಟಕ ಪರೀಕ್ಷಾ ಪ್ರಾಧಿಕಾರ KEA MBA-PGCET** ದಿಂದ ಬಂದ ಅಭ್ಯರ್ಥಿಗಳನ್ನು ತುಂಬಲಾಗುವುದು. ಯಾವುದೇ ಖಾಲಿ ಉಳಿದ ಸೀಟುಗಳಿಗೆ **ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆ ಮೂಲಕ** ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗುವುದು. ಇತರೆ ಪ್ರೋಗ್ರಾಮ್‌ಗಳಿಗೆ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ ಪ್ರವೇಶ ನೀಡಲಾಗುವುದು.

೨) ಕಾಶ್ಮೀರಿ ವಲಸಿಗರು ಮತ್ತು ಕಾಶ್ಮೀರಿ ಪಂಡಿತರು / ಕಾಶ್ಮೀರಿ ಹಿಂದು ಕುಟುಂಬಗಳ ವಲಸೆರಹಿತರು ಕಾಶ್ಮೀರಿ ಕಣಿವೆಯಲ್ಲಿ ವಾಸಿಸುವವರ ಮಕ್ಕಳಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪ್ರೋಗ್ರಾಮಗಳಲ್ಲಿ AICTE ಹಾಗೂ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಯದ ಆದೇಶದಂತೆ ಪ್ರವೇಶಾತಿಯಲ್ಲಿ ಮಿಸಲಾತಿ ನೀಡಲಾಗುವುದು.

ಆದೇಶ ಮೇರೆಗೆ,

ಪ್ರೊ. ಡಾ॥ ಸುರೇಶ ವಿ ನಾಡಗೌಡರ
ಕುಲಸಚಿವರು

ಪ್ರತಿಗಳು: ಆಪ್ತ ಸಹಾಯಕರು ಕುಲಪತಿಗಳು / ಕುಲಸಚಿವರು/ ವಿತ್ತಾಧಿಕಾರಿಗಳು/ ಸೂಚನಾ ಫಲಕ/ಕಛೇರಿ ಕಡತ.